


## ಪ್ರತೀ ಕ್ಷೇತ್ರದಲ್ಲೂ ಪರ, ವಿರೋಧ ಸಾಮಾನ್ಯ। ಅನುದಾನ ಕೊರತೆ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಕಾರ್ಯ ಸ್ಥಗಿತ

# ಅಪಪ್ರಚಾರಗಳಿಗೆ ಕಿವಿಕೊಡುವುದು ಬೇಡ: ನಿಖಿಲ್

**ಸಂ.ಕ.ಸಮಾಚಾರ ಕೆ.ಆರ್.ಪೇಟೆ**
ಮುಂದಿನ 2028ರ ಚುನಾವಣೆ ಜೆಡಿಎಸ್ ಭವಿಷ್ಯದ ಚುನಾವಣೆಯಲ್ಲ, ಕರ್ನಾಟಕದ 7.5 ಕೋಟಿ ಪ್ರಜೆಗಳ ಭವಿಷ್ಯ ನಿರ್ಧಾರವಾಗುವ ಚುನಾವಣೆ. ಅಪಪ್ರಚಾರಕ್ಕೆ ಕಾರ್ಯಕರ್ತರು ಕಿವಿಕೊಡುವುದು ಬೇಡ ಎಂದು ಜೆಡಿಎಸ್ ಯುವ ಘಟಕ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.





> ಮೂರು ವರ್ಷದಿಂದ ಸರ್ಕಾರದ ಅನುದಾನದ ಕೊರತೆ. ಗ್ಯಾರಂಟಿಗಳ ಕೊಡುತ್ತಿರುವುದಾಗಿ ನೆಪಗಳನ್ನು ಹೇಳಿ ಗ್ರಾಮೀಣ ಪ್ರದೇಶದ ಮೂಲಸೌಕರ್ಯ ಅಭಿವೃದ್ಧಿ ಕಾರ್ಯ ಸ್ಥಗಿತಗೊಂಡಿದೆ.
> ▪ ನಿಖಿಲ್‌ಕುಮಾರಸ್ವಾಮಿ, ಜೆಡಿಎಸ್ ಯುವ ಮುಖಂಡರು

ಪಟ್ಟಣದ ಪುರಸಭೆ ಮೈದಾನದಲ್ಲಿ ಶಾಸಕ ಎಚ್.ಟಿ.ಮಂಜು ಅವರ 51ನೇ ಹುಟ್ಟು ಹಬ್ಬದ ಅಂಗವಾಗಿ ಜೆಡಿಎಸ್ ಕಾರ್ಯಕರ್ತರು ಆಯೋಜಿಸಿದ್ದ ಅದ್ದೂರಿ ಅಭಿಮಾನೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿ, ನನ್ನ ಮನಸಲ್ಲಿ ಮಂಜಣ್ಣ ಇದ್ದಾರೆ. ಮಂಜಣ್ಣನ ಮನಸಲ್ಲಿ ನಾನು ಇದ್ದೀನಿ. ಮಾಧ್ಯಮಗಳಲ್ಲಿ ಅಪಪ್ರಚಾರ ಆಯಿತು. ಆ ಬಗ್ಗೆ ನಾನು ಏನೂ ಹೇಳುವುದಿಲ್ಲ ಎಂದರು.

ಯಾವುದೇ ಕ್ಷೇತ್ರದಲ್ಲಿ ಪರ, ವಿರೋಧ ಸಾಮಾನ್ಯ. ಕಾರ್ಯಕರ್ತರು 2028ಕ್ಕೆ ರಾಜ್ಯದಲ್ಲಿ ಜನಪರ ಸರ್ಕಾರ ಅಧಿಕಾರಕ್ಕೆ ಬರಲಿದೆ. ಕುಮಾರಣ್ಣ ಹಾಗೂ ಮಂಜಣ್ಣನ ಪರವಾಗಿ ಕಾರ್ಯಕರ್ತರು ಸಂಘಟನೆಗೆ ಮುಂದಾಗಬೇಕು. ಯುವ ಕಾರ್ಯಕರ್ತನಾಗಿ ನಿಮ್ಮ ಜತೆ ನಾನಿರುತ್ತೇನೆ ಎಂದರು.

ಮೊದಲ ಬಾರಿಗೆ ಶಾಸಕರಾಗಿರುವ ಮಂಜು ನಿಮ್ಮ ನಂಬಿಕೆಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ ಎಂದರು.

ಶಾಸಕ ಎಚ್.ಟಿ.ಮಂಜು ಮಾತನಾಡಿ, ಪಕ್ಷ ಮುಖಂಡರ ಪಕ್ಷವಲ್ಲ. ಕಾರ್ಯಕರ್ತರ ಪಕ್ಷ ಎಂಬುದನ್ನು ಸಾಬೀತು ಪಡಿಸಿದ್ದೀರಿ. ಕುಮಾರಣ್ಣ ಮಂಡ್ಯಕ್ಕೆ ಕಾರ್ಖಾನೆಗಳನ್ನು ತಂದು ಅಭಿವೃದ್ಧಿ ಪಡಿಸಬೇಕು ಎಂಬ ಕನಸು ಕಂಡಿದ್ದರು. ಕಾಂಗ್ರೆಸ್ ಸರ್ಕಾರ ಕುಮಾರಣ್ಣನಿಗೆ ಹೆಸರು ಬರುತ್ತದೆ ಎಂಬ ಕಾರಣಕ್ಕೆ ಕಾರ್ಖಾನೆಗೆ ಜಾಗ ಕೊಡುತ್ತಿಲ್ಲ ಎಂದು ಆರೋಪಿಸಿದರು.

2028ಕ್ಕೆ ನಮ್ಮ ಸರ್ಕಾರ ಬರುವುದು ಸೂರ್ಯ, ಚಂದ್ರ ಇರುವಷ್ಟು ಸತ್ಯ. ಆ ಸಮಯದಲ್ಲಿ ಕ್ಷೇತ್ರದ ಅಭಿವೃದ್ಧಿ ಕೆಲಸಗಳ ಕನಸು ನನಸಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಸುಮಾರು 800 ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಪೌರ ಕಾರ್ಮಿಕರು, ಆಟೋ ಚಾಲಕರು, ಪ್ರಗತಿ ಪರ ರೈತರಿಗೆ ಸನ್ಮಾನಿಸಿದ್ದೇವೆ. ಮಹಿಳೆಯರಿಗೆ ಹೊಲಿಗೆ ಯಂತ್ರ, ಗಂಗಾ ಕಲ್ಯಾಣ ಯೋಜನೆ ಫಲಾನುಭವಿಗಳಿಗೆ ಸಲಕರಣೆಗಳ ವಿತರಿಸಿದ್ದೇವೆ ಎಂದರು.

ಜೆಡಿಎಸ್ ರಾಜ್ಯ ವಕ್ತಾರ ಅಶ್ವಿನ್ ಕುಮಾರ್, ಶ್ರವಣಬೆಳಗೊಳ ಶಾಸಕ ಸಿ.ಎನ್.ಬಾಲಕೃಷ್ಣ, ಹುಣಸೂರು ಶಾಸಕ ಹರೀಶ್‌ಗೌಡ, ಹಾಸನ ಶಾಸಕ ಸ್ವರೂಪ್, ನಾಗಮಂಗಲ ಮಾಜಿ ಶಾಸಕ ಸುರೇಶ್‌ಗೌಡ, ಮನ್ಮುಲ್ ಮಾಜಿ ಅಧ್ಯಕ್ಷ ರಾಮಚಂದ್ರ, ಜೆಡಿಎಸ್ ಡಿ.ರಮೇಶ್, ಕಡೂರು ಜೆಡಿಎಸ್ ಮುಖಂಡ ಶೇಖರ್‌ಗೌಡ, ಮಲ್ಲೇನಹಳ್ಳಿ ಮೋಹನ್, ರೇಖಾಲೋಕೇಶ್, ಟಿಎಪಿಸಿಎಂಎಸ್ ಅಧ್ಯಕ್ಷ ಬಲದೇವ್, ಜೆಡಿಎಸ್ ರಾಜ್ಯ ವಕ್ತಾರ ಎ.ಆರ್.ರಘು, ದಿಶಾ ಸಮಿತಿ ಸದಸ್ಯ

# ನರೇಗಾ ಮುಂದುವರಿಕೆಗೆ ಕ್ರಮ ವಹಿಸಿ

## ಕರ್ನಾಟಕ ಕೃಷಿ -ಗ್ರಾಮೀಣ ಕಾರ್ಮಿಕರ ಸಂಘದ ವತಿಯಿಂದ ಕಾರ್ಯಾಗಾರ

**ಸಂ ಕ ಸಮಾಚಾರ, ಭಾರತೀನಗರ**
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ(ನರೇಗಾ) ಯನ್ನು ಕೇಂದ್ರ ಸರ್ಕಾರ ಮುಂದುವರಿಸಲು ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ. ಪುಟ್ಟಮಾದು ಒತ್ತಾಯಿಸಿದರು.

ಭಾರತೀನಗರದ ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಸಂಯುಕ್ತಾಶ್ರಯದಲ್ಲಿ ನಡೆದ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದರು.



ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಉದ್ದೇಶಪೂರ್ವಕವಾಗಿ ದುರ್ಬಲಗೊಳಿಸಿ, ಅದರ ಬದಲಿಗೆ ಜಿ.ರಾಮ್‌ಜಿ ಹೆಸರಿನ ಯೋಜನೆಯನ್ನು ಜಾರಿಗೊಳಿಸಲು ಮುಂದಾಗಿರುವುದು ಗ್ರಾಮೀಣ ಕಾರ್ಮಿಕರ ಪಾಲಿಗೆ ಮರಣಶಾಸನವಾಗಲಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

'ವಿಕಸಿತ ಭಾರತ-2047' ಹೆಸರಿನಲ್ಲಿ ಬಡತನ ನಿರ್ಮೂಲನೆ, ನಿರುದ್ಯೋಗ ನಿವಾರಣೆ ಹಾಗೂ ಭಾರತವನ್ನು ಶ್ರೀಮಂತ ರಾಷ್ಟ್ರವನ್ನಾಗಿ ಮಾಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಹೇಳುತ್ತಿರುವುದು ಕೇವಲ ಹಗಲು ಕನಸಾಗಿದೆ ಎಂದು ಟೀಕಿಸಿದರು.

ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರಕ್ಕೆ ಬಂದ ಬಳಿಕ ಜಿ.ರಾಮ್‌ಜಿ ಹೆಸರಿನ ಯೋಜನೆಯನ್ನು ಜಾರಿಗೊಳಿಸಲು ಮುಂದಾಗಿರುವುದು ಸರಿಯಲ್ಲ. ಈ ಹಿಂದೆ ವಿಧಾನಸಭೆಯಲ್ಲಿದ್ದ ಉದ್ಯೋಗ ಖಾತರಿ ಯೋಜನೆಯನ್ನೇ ಮುಂದುವರಿಸುವುದಾಗಿ ಹೇಳಿದ್ದರೂ, ಈಗ ಆ ಮಾತಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ. ಹನುಮೇಶ್ ಮಾತನಾಡಿ, 2006ರಲ್ಲಿ ಎಡಪಕ್ಷಗಳ ಒತ್ತಾಯದ ಫಲವಾಗಿ ಉದ್ಯೋಗ ಖಾತರಿ ಯೋಜನೆ ಜಾರಿಯಾಯಿತು. 2008ರಿಂದ ಮಂಡ್ಯ ಜಿಲ್ಲೆಯ ಕಾರ್ಮಿಕ ಫಲಾನುಭವಿಗಳು ಈ ಯೋಜನೆಯ ಪ್ರಯೋಜನ ಪಡೆಯುತ್ತಿದ್ದು, ಇಂದಿಗೂ ಕೆಲಸ ಮಾಡುತ್ತಿದ್ದಾರೆ. ಈಗ ಪ್ರಧಾನಿ ನರೇಂದ್ರ ಮೋದಿ ಅವರು ನರೇಗಾ ಯೋಜನೆಯನ್ನು ತೆಗೆದುಹಾಕಿ ಜಿ.ರಾಮ್‌ಜಿಯೋಜನೆಯನ್ನು ಜಾರಿಗೊಳಿಸುವ ಮೂಲಕ ಬಡವರ ಹೊಟ್ಟೆಯ ಮೇಲೆ ಬರೆ ಎಳೆದಿದ್ದಾರೆ ಎಂದು ಕಿಡಿಕಾರಿದರು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷ ಶಿವಮಲ್ಲಯ್ಯ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾಧ್ಯಕ್ಷೆ ಡಿ.ಕೆ. ಲತಾ, ಮುಖಂಡರಾದ ಬಿ.ಪಿ. ಅರುಣ್ ಕುಮಾರ್, ಶೋಭಾ, ಡಿ.ಎಚ್. ಆನಂದ, ಸುರೇಂದ್ರ, ತಳಗವಾಡಿ ಆನಂದ ಸೇರಿದಂತೆ ಹಲವರು ಉಪಸ್ಥಿತರಿದ್ದರು.



# ಕಾಮಗಾರಿಗೆ ಭೂಮಿಪೂಜೆ

**ಮದ್ದೂರು:** ಗ್ರಾಮೀಣ ಪ್ರದೇಶದ ಜನರಿಗೆ ಉತ್ತಮ ರಸ್ತೆ, ಚರಂಡಿ ಹಾಗೂ ಕುಡಿಯುವ ನೀರು ಸೇರಿದಂತೆ ಮೂಲಸೌಕರ್ಯಗಳನ್ನು ಕಲ್ಪಿಸಿದರೆ ಬಹುತೇಕ ಸಮಸ್ಯೆಗಳಿಗೆ ಪರಿಹಾರ ದೊರೆಯುತ್ತದೆ ಎಂದು ಶಾಸಕ ಉದಯ್ ಹೇಳಿದರು.

ತಾಲೂಕಿನ ಕೆ.ಶೆಟ್ಟಿಹಳ್ಳಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ 25 ಲಕ್ಷ ರೂ. ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ನನೆಗುದಿಗೆ ಬಿದ್ದಿದ್ದ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಜೊತೆಗೆ ಗ್ರಾಮೀಣ ರಸ್ತೆಗಳು ಹಾಗೂ ರೈತರಿಗೆ ಅನುಕೂಲವಾಗುವ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆ ಎಂದು ಹೇಳಿದರು.

ತಾಲೂಕಿನ ಬಹುತೇಕ ಗ್ರಾಮಗಳ ರಸ್ತೆಗಳು ಹಾಳಾಗಿದ್ದ ಹಿನ್ನೆಲೆಯಲ್ಲಿ ಹಂತ ಹಂತವಾಗಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಹೆಮ್ಮನಹಳ್ಳಿ, ಹನುಮಂತಪುರ, ಯರಗನಹಳ್ಳಿ, ಆಲಂಶೆಟ್ಟಿಹಳ್ಳಿ ಸೇರಿದಂತೆ ಹಲವು ಗ್ರಾಮಗಳಲ್ಲಿ ಸುಮಾರು 1 ಕೋಟಿ ರೂ. ವೆಚ್ಚದ ರಸ್ತೆ ಕಾಮಗಾರಿಗಳಿಗೆ ಈಗಾಗಲೇ ಚಾಲನೆ ನೀಡಲಾಗಿದೆ.

ಕಾರ್ಯಕ್ರಮದಲ್ಲಿ ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ಮಾಜಿ ಅಧ್ಯಕ್ಷ ಕದಲೂರು ರಾಮಕೃಷ್ಣ, ತಾಲೂಕು ಪಂಚಾಯತ್ ಅಧ್ಯಕ್ಷ ನಾಗಣ್ಣಗೌಡ, ಹರೀಶ್, ಚೆನ್ನಪ್ಪ ಸೇರಿದಂತೆ ಸಮಾಜದ ಮುಖಂಡರು, ವಿವಿಧ ಇಲಾಖೆಗಳ ಅಧಿಕಾರಿಗಳು ಸಾರ್ವಜನಿಕರು ಉಪಸ್ಥಿತರಿದ್ದರು.

# ಆರ್‌ಎಸ್‌ಎಸ್ ನೋಂದಣಿಗೆ ಆಗ್ರಹಿಸಿ ಇಂದು ಪ್ರತಿಭಟನೆ

**ಮಂಡ್ಯ:** ದೇಶದಲ್ಲಿ ಸಂವಿಧಾನಬದ್ಧವಾಗಿ ನೋಂದಣಿಯಾಗದೇ ವಿವಿಧ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್ ಎಸ್ ಎಸ್ ) ನೋಂದಣಿಯಾಗಬೇಕೆಂದು ಆಗ್ರಹಿಸಿ ಜೂ.25 ರಂದು ಮಂಡ್ಯ ನಗರದಲ್ಲಿ ಪ್ರತಿಭಟನೆ ನಡೆಸಲು ಪ್ರಗತಿಪರ ಸಂಘಟನೆಗಳು ನಿರ್ಧಾರ ಕೈಗೊಂಡಿವೆ.

ನಗರದ ಶಿವನಂಜಪ್ಪ ಉದ್ಯಾನವನದಲ್ಲಿ ಸಭೆ ನಡೆಸಿದ ಸಮಾನ ಮನಸ್ಕ ಮುಖಂಡರು, ಆರ್‌ಎಸ್‌ಎಸ್ ಒಂದು ಸಂಘಟನೆಯಾಗಿ ನೋಂದಣಿಯಾಗದೇ ಇರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಇದರ ನೋಂದಣಿಗಾಗಿ ಸಚಿವ ಪ್ರಿಯಾಂಕ್ ಖರ್ಗೆ ಧ್ವನಿಯೆತ್ತಿರುವುದು ಸರಿ. ಅವರ ನಿಲುವಿಗೆ ನಮ್ಮ ಬೆಂಬಲವಿದೆ ಎಂದರು.

ಸಂಘ ಪರಿವಾರ ವಿವಿಧ ಅಂಗ ಸಂಸ್ಥೆಗಳನ್ನು ರಚಿಸಿಕೊಂಡು ದೇಶದಲ್ಲಿ ಕೋಮು ಗಲಭೆಯಂತಹ ಘಟನೆ ನಡೆಸಿರುವುದು ಗುಟ್ಟಾಗಿ ಉಳಿದಿಲ್ಲ ಎಂದು ದೂರಿದರು.

ಭಾರತ ವಕೀಲರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಬಿ ಟಿ ವಿಶ್ವನಾಥ್, ವಕೀಲ ಸುಂಡಹಳ್ಳಿ ಮಂಜುನಾಥ್, ನಿವೃತ್ತ ಪ್ರಾಂಶುಪಾಲ ಹುಲ್ಕೆರೆ ಮಹಾದೇವ, ಅಖಿಲ ದಲಿತ ಸಂಘರ್ಷ ಸಮಿತಿಯ ರಮಾನಂದ, ದೇವರಾಜ ಅರಸು ಹಿಂದುಳಿದ ವರ್ಗಗಳ ಸಂಘಟನೆಯ ಎಲ್. ಸಂದೇಶ್, ಮುಖಂಡರಾದ ಸಿ.ಎಂ.ದ್ಯಾವಪ್ಪ, ಕೆ.ಎಚ್.ಲವ, ದೀಪಕ್, ರಘು, ರಾಚಪ್ಪ, ನಾರಾಯಣಸ್ವಾಮಿ, ಭೈರಲಿಂಗಪ್ಪ, ವಕೀಲ ಕಿಶೋರ್ ಸೇರಿದಂತೆ ಮುಂತಾದವರು ಹಾಜರಿದ್ದರು



# ಅಹೋರಾತ್ರಿ ರಕ್ತದಾನ ಶಿಬಿರದ ಟೀಸರ್ ಬಿಡುಗಡೆ

**ಮಳವಳ್ಳಿ :** ದೇಶ ಕಾಯುವ ಯೋಧರು ಹಾಗೂ ನಾಡಿಗೆ ಅನ್ನ ನೀಡುವ ರೈತರ ಗೌರವಾರ್ಥ ಹಾಗೂ 80ನೇ ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮದ ಅಂಗವಾಗಿ ಆಗಸ್ಟ್ 15ರಂದು 2026ರ ಸವಿನೆನಪಿಗಾಗಿ ಸತತ 26 ಗಂಟೆಗಳ ಕಾಲ 2026 ದಾನಿಗಳಿಂದ ಅಹೋರಾತ್ರಿ ಬೃಹತ್ ರಕ್ತದಾನ ಶಿಬಿರದ ಟೀಸರ್ ಬಿಡುಗಡೆ ಸಮಾರಂಭ ಪಟ್ಟಣದ ಫ್ರೆಂಡ್ಸ್ ಅಡ್ಡದಲ್ಲಿ ನಡೆಯಿತು.

ಪಟ್ಟಣದ ತ್ಯಾಗರಾಜರಸ್ತೆಯ ರೋಟರಿ ಸಂಸ್ಥೆಯ ಆವರಣದಲ್ಲಿ ಆಗಸ್ಟ್ 15ರಂದು ಬೆಳಗ್ಗೆ 8ಗಂಟೆಯಿಂದ 16ರ ಬೆಳಿಗ್ಗೆ 10 ಗಂಟೆವರೆಗೆ ಸತತ 24 ಗಂಟೆಗಳ ಕಾಲ ರಕ್ತ ದಾನ ಶಿಬಿರದಲ್ಲಿ ಪ್ರತಿಯೊಬ್ಬರೂ ಭಾಗವಹಿಸುವಂತೆ ಕೋರಲಾಯಿತು.

ಮಳವಳ್ಳಿಯ ಐತಿಹಾಸಿಕ ರಕ್ತದಾನ ಶಿಬಿರ ಕೇವಲ ದಾಖಲೆಗಾಗಿ ಅಲ್ಲ. ರಕ್ತದ ಕೊರತೆಯಿಂದ ಯಾವುದೇ ರೋಗಿಯ ಜೀವವೂ ಬಲಿಯಾಗಬಾರದು ಎನ್ನುವ ಆಶಯವಾಗಿದೆ. ಹಳ್ಳಿಯ ಜನರಲ್ಲಿರುವ ರಕ್ತದಾನ ಕುರಿತ ಮೌಢ್ಯ ಭಾವನೆಯನ್ನು ದೂರಗೊಳಿಸಬೇಕು. ಎಲ್ಲಾ ತಪ್ಪು ಕಲ್ಪನೆಗಳನ್ನು ಅಳಿಸಿ ಅದರ ಕುರಿತು ಜಾಗೃತಿ ಮೂಡಿಸಬೇಕು ಎಂದರು.



ಟೀಮ್ ಮಳವಳ್ಳಿ ಜೊತೆಗೆ ವಿವಿಧ ಸಂಘ-ಸಂಸ್ಥೆಗಳು, ಯುವ ಮಿತ್ರರು, ಪತ್ರಕರ್ತರು, ಸರ್ಕಾರಿ ಇಲಾಖೆಗಳು ಹಾಗೂ ರಕ್ತದಾನಿಗಳ ಒಕ್ಕೂಟ ಸೇರಿದಂತೆ ಎಲ್ಲಾರನ್ನೂ ಒಂದೂಗೂಡಿಸಿ ಶಿಬಿರದ ಯಶಸ್ವಿಗೆ ಶ್ರಮಿಸೋಣ ಎಂಬ ಆಶಯ ವ್ಯಕ್ತಪಡಿಸಲಾಯಿತು.

ಮಳವಳ್ಳಿ ಟೀಮ್ ಸದಸ್ಯರು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ವಿವಿಧ ಪಕ್ಷದ ಮುಖಂಡರು, ಪೊಲೀಸರು, ಮುಖಂಡರು ಸೇರಿದಂತೆ ಇತರರು ಇದ್ದರು.

# ಅಭಿವೃದ್ಧಿ ಕಾರ್ಯದಲ್ಲಿ ನೌಕರರ ಶ್ರಮ ಪ್ರಮುಖವಾದುದು

## ಪಂಚಾಯತ್ ರಾಜ್ ದಿನ: ಸಿಬ್ಬಂದಿಯ ಸೇವೆ, ಸಾಧನೆ, ಬದ್ಧತೆ ಗುರುತಿಸುವ ಉದ್ದೇಶ

**ಸಂ ಕ ಸಮಾಚಾರ, ಮಂಡ್ಯ**
ಗ್ರಾಮ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುವ ಪ್ರತಿಯೊಬ್ಬ ಅಧಿಕಾರಿಯೂ ಸಮಾಜದ ಪರಿವರ್ತನೆಯ ಭಾಗವಾಗಿದ್ದು, ಗ್ರಾಮೀಣ ಜನರ ಜೀವನಮಟ್ಟ ಸುಧಾರಣೆಗೆ ಅವರ ಸೇವೆ ಅತ್ಯಂತ ಮಹತ್ವದ್ದಾಗಿದೆ ಎಂದು ಜಿ.ಪಂ. ಸಿಇಒ ನಂದಿನಿ.ಕೆ.ಆರ್. ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ,ದರು.

ಕೇವಲ ಸಾಂಕೇತಿಕ ಆಚರಣೆಗೆ ಸೀಮಿತವಾಗದೇ, ಸಿಬ್ಬಂದಿಯ ಸೇವೆ, ಸಾಧನೆ ಹಾಗೂ ಬದ್ಧತೆಯನ್ನು ಗುರುತಿಸುವ ಉದ್ದೇಶದಿಂದ ಪಂಚಾಯತ್ ರಾಜ್ ದಿನಾಚರಣೆಯನ್ನು ಆಯೋಜಿಸಲಾಗಿದೆ. ತಂಡದ ಕಾರ್ಯಪದ್ಧತಿ, ಶಿಸ್ತು, ನೈತಿಕತೆ, ಆರೋಗ್ಯಕ ರ ಜೀವನಶೈಲಿ ಹಾಗೂ ಆತ್ಮತೃಪ್ತಿಯಿಂದ ಕಾರ್ಯನಿರ್ವಹಿಸುವುದು ಉತ್ತಮ ಎಂದು ಹೇಳಿದರು.

ಮಂಡ್ಯ ಜಿಲ್ಲೆ ಪಂಚಾಯತ್ ರಾಜ್ ಇಲಾಖೆಯ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ್ದು, ವಿಶೇಷವಾಗಿ ತೆರಿಗೆ ಸಂಗ್ರಹಣೆಯಲ್ಲಿ ದಾಖಲೆ ಸಾಧಿಸಿದೆ. ಸಿಬ್ಬಂದಿ ಅನುಮೋದನೆ ಪ್ರಕ್ರಿಯೆ ಪೂರ್ಣ ಗೊಳಿಸಿರುವುದು ಹಾಗೂ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನದಲ್ಲಿ ಜಿಲ್ಲೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ಶ್ರಮ ಪ್ರಮುಖ ಪಾತ್ರ ವಹಿಸಿದೆ ಎಂದು ಶ್ಲಾಘಿಸಿದರು.

ಪಂಚಾಯತ್ ರಾಜ್ ವ್ಯವಸ್ಥೆ ಬಲಪಡಿಸುವಲ್ಲಿ ಹಾಗೂ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನದಲ್ಲಿ ಮಹತ್ವದ ಪಾತ್ರವಹಿಸಿದ ವಿವಿಧ ಹಂತದ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಿರಿಯ ಅಭಿಯಂತರರು, ತಾ. ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಂಥಪಾಲಕರು, ಬಿಲ್ ಕಲೆಕ್ಟರ್‌ಗಳು ಸೇರಿದಂತೆ ವಿವಿಧ ಹಂತದ ಸಿಬ್ಬಂದಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬೇಸಿಗೆ ಶಿಬಿರಗಳನ್ನು ಯಶಸ್ವಿಯಾಗಿ ಆಯೋಜಿಸಿದ ಶಾಲಾ ಶಿಕ್ಷಕರಿಗೆ ಪ್ರಶಸ್ತಿ ಪತ್ರ ವಿತರಿಸಲಾಯಿತು.

ಜಿ.ಪಂ. ಉಪಕಾರ್ಯದರ್ಶಿ ಲಕ್ಷ್ಮಿ.ಪಿ, ಶಿವಲಿಂಗಯ್ಯ, ಮುಖ್ಯ ಯೋಜನಾಧಿಕಾರಿ ಧನುಷ್, ಜಿಲ್ಲಾ, ತಾ.ಪಂ, ಗ್ರಾ.ಪಂ ಅಧಿಕಾರಿಗಳು, ಇಲಾಖಾ ಮುಖ್ಯಸ್ಥರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.



बैंक ऑफ़ बड़ौदा
Bank of Baroda
ROSARB, ಬೆಂಗಳೂರು ದಕ್ಷಿಣ, 4ನೇ ಮಹಡಿ, ವಿಜಯ ಟವರ್, ಟ್ರಿನಿಟಿ ವೃತ್ತ, ಬೆಂಗಳೂರು-560001, ದೂರವಾಣಿ ಸಂಖ್ಯೆ: 080 25584066 (ಎಕ್ಸ್‌ಟೆನ್ಷನ್ ನಂ.: 128)
ಇ-ಮೇಲ್: sarbes@bankofbaroda.co.in Website: www.bankofbaroda.in

ಸ್ಥಿರಾಸ್ತಿಗಳ ಮಾರಾಟಕ್ಕೆ ಮಾರಾಟ ಸೂಚನೆ "ಅನುಬಂಧ- IV-A [ನಿಯಮ 6 (2) ಮತ್ತು 8 (6) ರ ನಿಬಂಧನೆ]

ಇ-ಹರಾಜು ಮಾರಾಟ ಪ್ರಕಟಣೆ ನಿಯಮ 6(2) & 8(6) ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002 ರ ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಸ್ಟ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ರಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ.

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನುದಾರರಿಗೆ / ಜಾಮೀನುದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್‌ಗೆ ಅಡಮಾನ / ಚಾರ್ಜ್ ಮಾಡಿರುವ ಈ ಕೆಳಗೆ ಸೂಚಿಸಿರುವ ಆಸ್ತಿಗಳ ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ, ಬೆಂಗಳೂರು ಇವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು, " ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ ಆಧಾರದ ಮೇಲೆ" ಮಾರಾಟ ಮಾಡಲಾಗುವುದು. ಸಾಲಗಾರರ / ಜಾಮೀನುದಾರರ /ಅಡಮಾನದಾರರ ಆಸ್ತಿಯ ವಿವರ / ಬಾಕಿ ಮೊತ್ತ / ಮೀಸಲು ಬೆಲೆ / ಹರಾಜಿನ ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಗುಣಾಂಕಗಳನ್ನು ಕೆಳಗೆ ವಿವರಿಸಿದೆ.

| ಕ್ರ. ಸಂ | ಸಾಲಗಾರರ / ಜಾಮೀನುದಾರರ / ಅಡಮಾನುದಾರ ಹೆಸರು & ವಿಳಾಸ | ಸ್ಥಿರಾಸ್ತಿಯ / ಚರಾಸ್ತಿಯ ವಿವರಗಳು (ಮಾಲೀಕರು/ಅಡಮಾನದಾರರ ಹೆಸರು) | ಎ. ಶಾಖೆಯ ಹೆಸರು ಬಿ. ಖಾತೆ ನಂ./ ಸಿ. ಬಾಕಿ ಮೊತ್ತ | ಇ-ಹರಾಜಿನ ದಿನಾಂಕ ಮತ್ತು ಸಮಯ | ಎ.ಮೀಸಲು ಬೆಲೆ, ಬಿ.ಇಎಂಡಿ, ಸಿ.ಬಿಡ್ ಗುಣಾಂಕ ಮೊತ್ತ, ಡಿ. ಸ್ವಾಧೀನದ ರೀತಿ | ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ. |
|---|---|---|---|---|---|---|
| 1 | (1) ಶ್ರೀ ನಾಸೀರ್ ರಾಯಮ್ಮರಕ್ಕರ್ ವೀಟಿಲ್ ಬಿನ್ ಶ್ರೀ ಹಂಝು ರಾಯಮ್ಮರಕ್ಕರ್ ವೆಟ್ಟಿಲ್ (ಸಾಲಗಾರರು) 1ಬಿ/2, ಫ್ಲಾಟ್ ನಂ.413, 365-Algoze Indl 2nd, Dubai- UAE. ಮತ್ತೊಂದು ವಿಳಾಸ : ಶ್ರೀ ನಾಸೀರ್ ರಾಯಮ್ಮರಕ್ಕರ್ ವೀಟಿಲ್ ಬಿನ್ ಶ್ರೀ ಹಂಝು ರಾಯಮ್ಮರಕ್ಕರ್ ವೆಟ್ಟಿಲ್ (ಸಾಲಗಾರರು) ಖಾಯಂ ವಿಳಾಸ: ರಾಯಮ್ಮರಕ್ಕರ್ ವೀಟಿಟಿಲ್ ಹೌಸ್, ತಿರುನೆಲ್ಲೂರು, ಮುಲ್ಲಸ್ಸೇರಿ, ತ್ರಿಶೂರ್, ಕೇರಳ - 680508 (2) ಶ್ರೀಮತಿ.ಶಬಾನಾ ನಸೀರ್ ಕೋಂ ಶ್ರೀ ನಸೀರ್ ರಾಯಮ್ಮರಕ್ಕರ್ ವೀಟಿಲ್ (ಜಾಮೀನುದಾರರು), ಶಬಾನಾ ನಾಸೀರ್, ವಿಳಾಸ : ರಾಯಮ್ಮರಕ್ಕರ್, ವೀಟಿಲ್ ಹೌಸ್, ತ್ರಿನೆಲ್ಲೂರ್, ಮುಲ್ಲಸ್ಸೇರಿ, ತ್ರಿಶೂರ್, ಕೇರಳ-680508 | (1) ಫ್ಲಾಟ್ ನಂ.ಎಫ್-503, 5ನೇ ಮಹಡಿ, ಎಫ್-ಟವರ್, ಜುವಾರಿ ಗಾರ್ಡನ್ ಸಿಟಿ ಎಂದು ಕರೆಯಲ್ಪಡುವ ಕಟ್ಟಡದ ಸರ್ವೆ ನಂ.111/1ಎ, 107/1, 107/2, 106/1 ಮತ್ತು 106/2, ಈ ಆಸ್ತಿಯು ಹುಲಿಕೆರೆ ಗ್ರಾಮ, ಬೆಳಗೊಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ-571606ರಲ್ಲಿದೆ. 1225 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ, 83.40 ಚದರ ಮೀಟರ್ ಕಾರ್ಪೆಟ್ ಪ್ರದೇಶ ಮತ್ತು 42.36 ಚದರ ಮೀಟರ್ ಯುಡಿಎಸ್ ಪ್ರದೇಶ ಮತ್ತು ಜೊತೆಗೆ ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. ಚಕ್ಕುಬಂದಿ : ಪೂರ್ವಕ್ಕೆ : ಫ್ಲಾಟ್ ನಂ. ಎಫ್-502, ಪಶ್ಚಿಮಕ್ಕೆ : ಫ್ಲಾಟ್ ನಂ. ಎಫ್-504, ಉತ್ತರಕ್ಕೆ : ತೆರೆದ ಜಾಗ, ದಕ್ಷಿಣಕ್ಕೆ : ಫ್ಲಾಟ್ ನಂ. ಎಫ್-506. BAANKNET PROPERTY ID: BARBVJSABANASEER | ಎ. ROSARB (ಮೂಲ ಶಾಖೆ ಸಾರಕ್ಕಿ ಇ ವಿಜಯ ಬ್ಯಾಂಕ್) ಬಿ. ಖಾತೆ ಸಂಖ್ಯೆ. 74150600003035; 74150600003041 ಸಿ. ರೂ.1,01,49,775/- ದಿನಾಂಕ: 24.06.2026 ರಂದು ಇದ್ದಂತೆ ಮತ್ತು ಹೆಚ್ಚಿನ ಬಡ್ಡಿ ಮತ್ತು ಜೊತೆಗೆ ಪಾವತಿಯ ದಿನಾಂಕದವರೆಗೆ ವೆಚ್ಚಗಳು, ಶುಲ್ಕಗಳು ಮತ್ತು ವೆಚ್ಚಗಳು. | 13.07.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ | ಎ. ರೂ.46,43,730/- ಬಿ. ರೂ.4,64,373/- ಸಿ. ರೂ. 25,000/- ಡಿ. ಭೌತಿಕ ಸ್ವಾಧೀನ | 25.06.2026 ರ ನಂತರ (ಅಧಿಕೃತ ಅಧಿಕಾರಿಯಿಂದ ಪೂರ್ವಾನುಮತಿಯೊಂದಿಗೆ) |
| 2 | (1) ಶ್ರೀ ನಾಸೀರ್ ರಾಯಮ್ಮರಕ್ಕರ್ ವೀಟಿಲ್ ಬಿನ್ ಶ್ರೀ ಹಂಝು ರಾಯಮ್ಮರಕ್ಕರ್ ವೆಟ್ಟಿಲ್ (ಸಾಲಗಾರರು) 1ಬಿ/2, ಫ್ಲಾಟ್ ನಂ.413, 365-Algoze Indl 2nd, Dubai- UAE. ಮತ್ತೊಂದು ವಿಳಾಸ : ಶ್ರೀ ನಾಸೀರ್ ರಾಯಮ್ಮರಕ್ಕರ್ ವೀಟಿಲ್ ಬಿನ್ ಶ್ರೀ ಹಂಝು ರಾಯಮ್ಮರಕ್ಕರ್ ವೆಟ್ಟಿಲ್ (ಸಾಲಗಾರರು) ಖಾಯಂ ವಿಳಾಸ: ರಾಯಮ್ಮರಕ್ಕರ್ ವೀಟಿಟಿಲ್ ಹೌಸ್, ತಿರುನೆಲ್ಲೂರು, ಮುಲ್ಲಸ್ಸೇರಿ, ತ್ರಿಶೂರ್, ಕೇರಳ - 680508 (2) ಶ್ರೀಮತಿ.ಶಬಾನಾ ನಸೀರ್ ಕೋಂ ಶ್ರೀ ನಸೀರ್ ರಾಯಮ್ಮರಕ್ಕರ್ ವೀಟಿಲ್ (ಜಾಮೀನುದಾರರು), ಶಬಾನಾ ನಾಸೀರ್, ವಿಳಾಸ : ರಾಯಮ್ಮರಕ್ಕರ್, ವೀಟಿಲ್ ಹೌಸ್, ತ್ರಿನೆಲ್ಲೂರ್, ಮುಲ್ಲಸ್ಸೇರಿ, ತ್ರಿಶೂರ್, ಕೇರಳ-680508 | (2) ಫ್ಲಾಟ್ ನಂ.ಎಫ್-1003, 10ನೇ ಮಹಡಿ, ಎಫ್-ಟವರ್, ಜುವಾರಿ ಗಾರ್ಡನ್ ಸಿಟಿ ಎಂದು ಕರೆಯಲ್ಪಡುವ ಕಟ್ಟಡದ ಸರ್ವೆ ನಂ.111/1ಎ, 107/1, 107/2, 106/1 ಮತ್ತು 106/2, ಈ ಆಸ್ತಿಯು ಹುಲಿಕೆರೆ ಗ್ರಾಮ, ಬೆಳಗೊಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ-571606ರಲ್ಲಿದೆ. 1225 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ, 83.40 ಚದರ ಮೀಟರ್ ಕಾರ್ಪೆಟ್ ಪ್ರದೇಶ ಮತ್ತು 42.36 ಚದರ ಅಡಿ ಯುಡಿಎಸ್ ಪ್ರದೇಶ, ಜೊತೆಗೆ ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. ಚಕ್ಕುಬಂದಿ : ಪೂರ್ವಕ್ಕೆ :ಫ್ಲಾಟ್ ನಂ. ಜಿ-1002, ಪಶ್ಚಿಮಕ್ಕೆ : ಫ್ಲಾಟ್ ನಂ. ಎಫ್-1004, ಉತ್ತರಕ್ಕೆ : ತೆರೆದ ಜಾಗ, ದಕ್ಷಿಣಕ್ಕೆ : ಫ್ಲಾಟ್ ನಂ. ಎಫ್-1006. BAANKNET PROPERTY ID: BARBVJSABANASEER1 | ಎ. ROSARB (ಮೂಲ ಶಾಖೆ ಸಾರಕ್ಕಿ ಇ ವಿಜಯ ಬ್ಯಾಂಕ್) ಬಿ. ಖಾತೆ ಸಂಖ್ಯೆ. 74150600003034; 74150600003040 ಸಿ. ರೂ.1,01,54,556/- ದಿನಾಂಕ: 24.06.2026 ರಂದು ಇದ್ದಂತೆ ಮತ್ತು ಹೆಚ್ಚಿನ ಬಡ್ಡಿ ಮತ್ತು ಜೊತೆಗೆ ಪಾವತಿಯ ದಿನಾಂಕದವರೆಗೆ ವೆಚ್ಚಗಳು, ಶುಲ್ಕಗಳು ಮತ್ತು ವೆಚ್ಚಗಳು. | 13.07.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ | ಎ. ರೂ.46,43,730/- ಬಿ. ರೂ.4,64,373/- ಸಿ. ರೂ. 25,000/- ಡಿ. ಭೌತಿಕ ಸ್ವಾಧೀನ | 25.06.2026 ರ ನಂತರ (ಅಧಿಕೃತ ಅಧಿಕಾರಿಯಿಂದ ಪೂರ್ವಾನುಮತಿಯೊಂದಿಗೆ) |

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು https://www.bankofbaroda.in/e-auction ವೆಬ್‌ಸೈಟ್ ಲಿಂಕ್ ಮತ್ತು ಆನ್‌ಲೈನ್ ಹರಾಜು ಪೋರ್ಟಲ್ Baanknet.com ಅನ್ನು ನೋಡಿ/ಭೇಟಿ ನೀಡಿ. ಆಸ್ತಿ ತೆರಿಗೆ, ಇ-ಖಾತಾ ಶುಲ್ಕಗಳು ಮತ್ತು ಯಾವುದೇ ಇತರ ಕಾನೂನು ಶುಲ್ಕಗಳಿಗೆ ಸಂಬಂಧಿಸಿದ ಬಾಕಿ ಶುಲ್ಕಗಳನ್ನು ಅತಿ ಹೆಚ್ಚು ಬಿಡ್ಡುದಾರರು ಭರಿಸಬೇಕಾಗುತ್ತದೆ. ಅಲ್ಲದೆ, ಬಿಡ್ಡುದಾರರು ಅಧಿಕೃತ ಅಧಿಕಾರಿಯನ್ನು ದೂರವಾಣಿ ಸಂಖ್ಯೆ : 080-25011441 ಮತ್ತು ಮೊಬೈಲ್ ಸಂಖ್ಯೆ : 9137960132 ನಲ್ಲಿ ಸಂಪರ್ಕಿಸಬಹುದು.

ದಿನಾಂಕ: 24.06.2026
ಸ್ಥಳ : ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ.

**ಸಾರ್ವಜನಿಕ ಪ್ರಕಟಣೆ**

ನಮ್ಮ ಕಕ್ಷಿದಾರರು, ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಹಾಗು "ಇನ್ನು ಮುಂದೆ ಷೆಡ್ಯೂಲ್ ಸ್ವತ್ತು" ಎಂದು ಕರೆಯಲ್ಪಡುವ ಖಾಲಿ ನಿವೇಶನವನ್ನು, ಬೆಂಗಳೂರು - 560 055, ಮಲ್ಲೇಶ್ವರಂ, 6ನೇ ಮುಖ್ಯ ರಸ್ತೆ, 15ನೇ ಅಡ್ಡ ರಸ್ತೆ, ನಂ.92 ಇಲ್ಲಿ ವಾಸವಾಗಿರುವ 64 ವರ್ಷವಯಸ್ಸಿನ ಶ್ರೀ ಎಸ್ ಆರ್ ಜನಾರ್ಧನ್ ಬಿನ್ ಶ್ರೀ ಎಸ್ ಎಂ ರಾಧಕೃಷ್ಣ ಶೆಟ್ಟಿ ("ಮಾಲೀಕರು"), ಇವರಿಂದ ಖರೀದಿಸಲು ಇಚ್ಚಿಸಿರುತ್ತಾರೆ.

ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಅಥವಾ ಅದರ ಯಾವುದೇ ಭಾಗಶಃ ಸ್ವತ್ತಿನ ಮೇಲೆ ಅಥವಾ ಮೇಲೆ ತಿಳಿಸಿದ ದಾಖಲೆಗಳ ಬಗ್ಗೆ, ಯಾವುದೇ ರೀತಿಯಲ್ಲಿ ಹಕ್ಕು ಪ್ರತಿಪಾದನೆ, ಮಾಲೀಕತ್ವ, ಆಸಕ್ತಿ ಹೊಂದಿರುವ ಅಥವಾ ಅವುಗಳ ದಾಖಲೆಗಳ ಬಗ್ಗೆ ಅಥವಾ ಮಾಲೀಕರ ವಿರುದ್ಧ ಯಾವುದೇ ರೀತಿಯಲ್ಲಿ ಹಕ್ಕು ಪ್ರತಿಪಾದನೆ ಮಾಡಲಿಚ್ಚಿಸುವ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಇದ್ದಲ್ಲಿ ಅಥವಾ ಸದರಿ ಸ್ವತ್ತಿನ ಖರೀದಿ/ ವ್ಯವಹಾರದ ವಿರುದ್ಧ ಆಕ್ಷೇಪಣೆ ಇದ್ದಲ್ಲಿ, ತಾವು ಯಾವ ಆಧಾರದ ಮೇಲೆ ಅಂತಹ ಹಕ್ಕು ಪ್ರತಿಪಾದನೆ, ಮಾಲೀಕತ್ವ, ಆಸಕ್ತಿ ಹೊಂದಿದ್ದಾರೆ ಎಂಬುದರ ಬಗ್ಗೆ ಅಸಲಿ ಅಥವಾ ಇನ್ನಾವುದೇ ದಾಖಲೆ/ಗಳ ಸಹಿತ, ಈ ಸಾರ್ವಜನಿಕ ಸೂಚನೆ ಪ್ರಕಟಗೊಂಡ ಹದಿನೈದು (15) ದಿವಸಗಳೊಳಗಾಗಿ ಈ ಕೆಳಗೆ ಸಹಿ ಮಾಡಿರುವವರಿಗೆ ಲಿಖಿತ ರೂಪದಲ್ಲಿ ತಿಳಿಸಬೇಕು. ತದನಂತರ, ಯಾವುದೇ ನೈಜವಾದ ಹಾಗು ನ್ಯಾಯಸಮ್ಮತ ಆಕ್ಷೇಪಣೆಗಳು ಇಲ್ಲದಿದ್ದಲ್ಲಿ, ಯಾವುದೇ ಆಕ್ಷೇಪಣೆ ಅಥವಾ ಹಕ್ಕು ಪ್ರತಿಪಾದನೆಗಳು ಬಿಟ್ಟುಬಿಡಲಾಗಿದೆ ಎಂದು ಪರಿಗಣಿಸಿ, ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಮುಂದಾಗುವರು.

**ಷೆಡ್ಯೂಲ್ ಸ್ವತ್ತು**

ಬೆಂಗಳೂರು ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಜಾರಕಬಂಡೆ ಕಾವಲ್ ಗ್ರಾಮದ 4ನೇ ಬ್ಲಾಕ್, ನಂದಿನಿ ಬಡಾವಣೆ, 9ನೇ ಮುಖ್ಯ ರಸ್ತೆಯಲ್ಲಿರುವ ಸರ್ವೆ ನಂ.1 ರಲ್ಲಿ ರಚಿತವಾದ ಪೂರ್ವ ಪಶ್ಚಿಮ 30 ಅಡಿ ಹಾಗು ಉತ್ತರ ದಕ್ಷಿಣ 40 ಅಡಿ, ಒಟ್ಟು 1,200 ಚ.ಅಡಿ ವಿಸ್ತೀರ್ಣದ ಖಾಲಿ ನಿವೇಶನ ಸಂಖ್ಯೆ 127, ಬಿ.ಬಿ.ಎಂ.ಪಿ ಪಿ.ಐ.ಡಿ.ಸಂಖ್ಯೆ 12-84-127/54, ಇ.ಪಿ.ಐ.ಡಿ. ಸಂಖ್ಯೆ 3949078046, ಹೊಸ ವಾರ್ಡ್ ಸಂಖ್ಯೆ 43, (ಹಳೇ ವಾರ್ಡ್ ಸಂಖ್ಯೆ 12) ಕ್ಕೆ ಚೆಕ್ಕುಬಂದಿ:

ಪೂರ್ವಕ್ಕೆ : ರಸ್ತೆ;
ಪಶ್ಚಿಮಕ್ಕೆ : ನಿವೇಶನ ಸಂಖ್ಯೆ 126;
ಉತ್ತರಕ್ಕೆ : ನಿವೇಶನ ಸಂಖ್ಯೆ 93; ಹಾಗು
ದಕ್ಷಿಣಕ್ಕೆ : ರಸ್ತೆ.

ದಿನಾಂಕ: 24.06.2026
ಸ್ಥಳ: ಬೆಂಗಳೂರು
ಸಾಧಿಕ್, ವಕೀಲರು, ನಂ.130/1, ಹಲಸೂರು ರಸ್ತೆ, ಬೆಂಗಳೂರು - 560 042

# ಪ್ರಚಾರದ ಬಾವುಟ ಲೋಕಾರ್ಪಣೆ

**ಸಂ.ಕ.ಸಮಾಚಾರ,ಬೆಳಕವಾಡಿ**
ಮುಂದಿನ ಆ.15ರ ಶನಿವಾರ ಮಳವಳ್ಳಿಯ ರೋಟರಿ ಶಾಲೆಯ ಆವರಣದಲ್ಲಿ ನಡೆಯುವ ಐತಿಹಾಸಿಕ ರಕ್ತದಾನ ಶಿಬಿರದ ಪೂರ್ವಭಾವಿ ಸಭೆಯಲ್ಲಿ ಗ್ರಾಮದ ಎಲ್ಲಾ ಸಮುದಾಯದ ಮುಖಂಡರು ಶಿಬಿರದ ಪ್ರಚಾರದ ಬಾವುಟ ಲೋಕಾರ್ಪಣೆ ಮಾಡುವ ಮೂಲಕ ಬುಧವಾರ ಚಾಲನೆ ನೀಡಿದ್ದಾರೆ.

ತಾಲೂಕಿನ ಬಿಜಿಪುರ ಹೋಬಳಿಯ ಬೆಳಕವಾಡಿ ಗ್ರಾಮದ ಕಟ್ಟೆ ಬಸವೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಏರ್ಪಡಿಸಿದ್ದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ನಾಡಗೌಡ ಮಯೂರ, ಬಿ.ಎಂ.ಕಾಂತರಾಜು, ಅರ್ಷದ್ ಪಾಷಾ, ಪುಟ್ಟಮಾದು, ರಕ್ತದಾನ ನಮ್ಮೆಲ್ಲರ ಕರ್ತವ್ಯ ಕೇವಲ ಅಮೂಲ್ಯ ಜೀವಗಳನ್ನು ಉಳಿಸುವುದಲ್ಲದೇ ಆರೋಗ್ಯ ಸಮತೋಲನ ಕಾಪಾಡಲು ಮತ್ತು ರಕ್ತ ಸಂಬಂಧಿಗಳ ಕಾಯಿಲೆ ತಡೆಗಟ್ಟಲುಸಹಕಾರಿಯಾಗಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಅಪಘಾತ ಹಾಗೂ ಹೆರಿಗೆ ಸಂದರ್ಭದಲ್ಲಿ ರಕ್ತದಾನದ ಸಮಸ್ಯೆ ಹೆಚ್ಚು ಕಂಡು ಬರುತ್ತಿದೆ ಆದ್ದರಿಂದ ಇಲ್ಲಿ ಭಾಗವಹಿಸಿರುವ ಎಲ್ಲಾ ಮುಖಂಡರು ಯುವಕರು ತಮ್ಮ ತಮ್ಮ ಸಮುದಾಯದ ಯುವಕರಿಗೆ ಆ.15 ಬೆಳಿಗ್ಗೆ 8 ಗಂಟೆಯಿಂದ ಆ.16 ಬೆಳಿಗ್ಗೆ 10ಗಂಟೆವರೆಗೆ ಒಟ್ಟು26 ಗಂಟೆಗಳ ಕಾಲ ನಡೆಯುವ ರಕ್ತದಾನ ಶಿಬಿರದಲ್ಲಿ ಪಾಲ್ಗೊಳ್ಳುವ ಮೂಲಕ ರಕ್ತದಾನಮಾಡುವಂತೆ ಜಾಗೃತಿ ಮೂಡಿಸಬೇಕು ಎಂದು ನುಡಿದರು.

ಬೆಳಕವಾಡಿ ಗ್ರಾಮದಿಂದ ಸುಮಾರು 500 ಯೂನಿಟ್ ರಕ್ತವನ್ನು ಸಂಗ್ರಹಿಸುವ ಮೂಲಕ ರಕ್ತದಾನ ಶಿಬಿರವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು,

ಟೀಮ್ ಮಳವಳ್ಳಿ ಸದಸ್ಯ ಪ್ರಭುಸ್ವಾಮಿ ಮಾತನಾಡಿ, ಬೆಳಕವಾಡಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ2013ರಲ್ಲಿ ಏರ್ಪಡಿಸಿದ್ದ ವೇಳೆ 208 ಯೂನಿಟ್, ಸಾರ್ವಜನಿಕ ಪ್ರೌಢಶಾಲೆಯಲ್ಲಿ 2015ರಲ್ಲಿ 231 ಯೂನಿಟ್ ಹಾಗೂ 2018ರಲ್ಲಿ ಇದೇಶಾಲೆ 179 ಯೂನಿಟ್ ರಕ್ತಸಂಗ್ರಹ ಮಾಡಿದ ಹೆಗ್ಗಳಿಕೆ ಗ್ರಾಮಕ್ಕಿದೆ. ಜಿಲ್ಲೆಯಲ್ಲಿ ರಕ್ತದ ಕೊರತೆ ಹೋಗಲಾಡಿಸಲು ನಿರಂತರ ರಕ್ತದಾನ ಶಿಬಿರಗಳು ಆಯೋಜಿಸಲಾಗುತ್ತಿದೆ ಎಂದು ಹೇಳಿದರು.

2026 ಯೂನಿಟ್ ರಕ್ತ ಸಂಗ್ರಹಿಸುವ ಗುರಿ ಹೊಂದಿದ್ದು ಯುವಕರು-ಯುವತಿಯರು, ಯುವ ಸಂಘಟನೆಗಳು ವಿವಿಧ ಸಂಘ-ಸಂಸ್ಥೆಗಳ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ರಕ್ತದಾನ ಮಾಡಬೇಕೆಂದು ತಿಳಿಸಿದರು,

ಸಭೆಯಲ್ಲಿ ಗ್ರಾ.ಪಂ.ಅಧ್ಯಕ್ಷ ವೆಂಕಟಪ್ಪ, ಪಟೇಲ್ ಎಸ್. ಮಹದೇವಸ್ವಾಮಿ, ಮುಸ್ಲಿಂ ಸಮುದಾಯದ ಯಜಮಾನರಾದ ಕಲೀಂ ಅಹಮ್ಮದ್,ತಾ.ಪಂ.ಮಾಜಿ ಸದಸ್ಯ ಮಹದೇವಶೆಟ್ಟಿ, ಪುರೋಹಿತ ಶ್ರೀನಿವಾಸ್, ಚಿಕ್ಕಮಾರ, ಯಾಜಮಾನ್ ಟೈಲರ್ ವೆಂಕಟಾಚಲ, ನಾಗಮರಿ, ಹೋಟಲ್ ಮಹೇಶ್, ಕ್ರೇಜಿ ಮಾದೇಶಸ್ವಾಮಿ, ಶಾಂತಕುಮಾರಿ, ರಾಜೇಶ್, ಶೇಖರ್, ಜಾಕಿರವಿ, ಹೂವಿನಮೂರ್ತಿ, ನಾಗಣ್ಣ,ವಿಜಯ್,ಮಹೇಶ್, ಮಳವಳ್ಳಿ ಟೀಮ್ ನ ಸದಸ್ಯರಾದ ತಳಗವಾದಿಪ್ರಕಾಶ್, ಶಿವಪ್ರಕಾಶ್, ಸಂಜು ಸೇರಿದಂತೆ ಹಲವರು ಹಾಜರಿದ್ದರು.



CMYK